# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 69/2024

**ಸಾಕ್ಷಿಯನ್ನು ದಿಃ 06.01.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಅರುಣ | ಸಿಡಬ್ಲ್ಯೂಃ 7 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಲಕ್ಷ್ಮಯ್ಯ | | |
| ವಯಸ್ಸು | 34 ವರ್ಷ | | |
| ಕೆಲಸ | ಕೂಲಿ ಕೆಲಸ | | |
| ವಾಸಸ್ಥಳ | ಕಾಳೇಗೌಡನ ಕೊಪ್ಪಲು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನನಗೆ ಚಾಸಾ-1, 4 ರಿಂದ 6 ಮತ್ತು 8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ದಿನಾಂಕಃ 21.11.2023ರಂದು ನಾನು ಮತ್ತು ಚಾಸಾ-6 ರವರು ಚಾಸಾ-1 ಮತ್ತು 4 ರವರರಿಗೆ ಸೇರಿದ ಬೀಜಗನಹಳ್ಳಿ ಗ್ರಾಮದ ಜಮೀನಿಗೆ ಕೂಲಿ ಕೆಲಸಕ್ಕೆಂದು ಹೋಗಿದ್ದೆವು. ಬೆಳಿಗ್ಗೆ 10 ಗಂಟೆ ನಾವು ಜಮೀನಿನ ಹತ್ತಿರ ಹೋದೆವು. ಆಗ ಚಾಸಾ-1 ಮತ್ತು 4 ರವರು ಚಾಸಾ-8 ರವರೊಂದಿಗೆ ಇದ್ದರು. ಚಾಸಾ-5 ರವರ ಟ್ರ್ಯಾಕ್ಟರ್ ಮೂಲಕ ಜಮೀನನ್ನು ಉಳುಮೆ ಮಾಡಿಸುತ್ತಿದ್ದರು. ಆಗ 8 ಜನ ಆರೋಪಿತರು ಗುಂಪು ಕಟ್ಟಿಕೊಂಡು ಸದರಿ ಜಮಿನಿಗೆ ಬಂದು ಗಲಾಟೆ ಮಾಡಿ ಚಾಸಾ-1 ಮತ್ತು 4 ರವರಿಗೆ ಸೂಳೆಮಗನೇ, ಬೋಳಿಮಗನೇ ಮತ್ತು ರಂಡೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉಳುಮೆ ಮಾಡುವುದನ್ನು ತಡೆಗಟ್ಟಿದರು. ಇನ್ನೊಂದು ಬಾರಿ ಜಮೀನಿನ ಹತ್ತಿರ ಬಂದರೆ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು. ಟ್ರ್ಯಾಕ್ಟರ್ ಅನ್ನು ಉಳುಮೆ ಮಾಡಲು ಬಂದಿದ್ದ ಚಾಸಾ-5 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದು ಉಳುಮೆ ಮಾಡದಂತೆ ತಡೆದರು. ನಾನು, ಚಾಸಾ-6 ಮತ್ತು 8 ರವರು ಚಾಸಾ-1 ಮತ್ತು 4 ರವರನ್ನು ಠಾಣೆಗೆ ಹೋಗಿ ದೂರು ಕೊಡೋಣ ಎಂದು ಸಮಾಧಾನಪಡಿಸಿ ಕರೆದುಕೊಂಡು ಹೋದೆವು. ಈ ಬಗ್ಗೆ ನಾನು ಪೋಲೀಸ್ ಮುಂದೆ ಹೇಳಿಕೆ ನೀಡಿದ್ದೇನೆ. ಆ ದಿನ ಚಾಸಾ-1 ಮತ್ತು 4 ರವರ ಜಮೀನಿಗೆ ಗುಂಪುಕಟ್ಟಿಕೊಂಡು ಬಂದವರ ಹೆಸರು ಚಂದ್ರಶೇಖರ,

ಈರಣ್ಣೇಗೌಡ, ಕೆಂಡೇಗೌಡ, ಸಾಕಮ್ಮ, ಮಲ್ಲಮ್ಮ, ಶಿವಮ್ಮ, ಸಣ್ಣಮ್ಮ, ಅಭಿ ಆಗಿದ್ದರು. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ರಿಂದ 4, 6 ಮತ್ತು 7ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. (1, 5 ಮತ್ತು 8ನೇ ಆರೋಪಿತರು ಗೈರು ಹಾಜರಾಗಿದ್ದು, ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲು: ಆರೋಪಿತರ ಪರ RKS ವಕೀಲರಿಂದ:**

ನನಗೆ ಚಾಸಾ-1 ರವರು 10 ವರ್ಷಗಳಿಂದ ಪರಿಚಯ. ಆ ದಿನ 10 ಗಂಟೆಗೆ ಕೆಲಸಕ್ಕೆ ಹೋಗಿದ್ದೆ. ನಾನು ಜಮೀನಿಗೆ ಹೋಗುವಷ್ಟರಲ್ಲಿ ಟ್ರ್ಯಾಕ್ಟರ್ ಬಂದು ಉಳುಮೆ ಮಾಡುತ್ತಿತ್ತು. ಅಂದಾಜು ಎಷ್ಟು ಜಮೀನು ಉಳುಮೆ ಮಾಡಿತ್ತು ಎಂದು ಗೊತ್ತಿಲ್ಲ. ಸುಮಾರು 10 ಗುಂಟೆ ಉಳುಮೆ ಮಾಡಲಾಗಿತ್ತು. ಜಮೀನಿನ ಸರ್ವೇ ನಂಬರ್ ಗೊತ್ತಿಲ್ಲ. ಉಳುಮೆ ಮಾಡಲಾಗಿದ್ದ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ಉಳುಮೆ ಮಾಡುತ್ತಿದ್ದ ಜಮೀನು ಸುಮಾರು 5 ಗುಂಟೆ ಆಗಿತ್ತು. ಸದರಿ 5 ಗುಂಟೆಯ ಚಕ್ಕುಬಂದಿ ಗೊತ್ತಿಲ್ಲ. ಆ ಜಮೀನಿಗೆ ನಾನು ಅದೇ ಮೊದಲ ಬಾರಿಗೆ ಕೆಲಸಕ್ಕೆ ಹೋಗಿದ್ದೆ. ಚಾಸಾ-1 ರವರು ಅಲ್ಲಿ ಬೇರೆ ಜಮೀನು ಖರೀದಿಸಿಲ್ಲ. ಆರೋಪಿರು ಯಾವ ಜಮೀನಿನ ಸ್ವಾಧೀನದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಉಳುಮೆ ಮಾಡುತ್ತಿದ್ದ ಜಮೀನಿನಲ್ಲಿ ಹಿಂದೆ ಯಾರು ಸ್ವಾಧೀನ ಇದ್ದರು ಎಂದು ಗೊತ್ತಿಲ್ಲ.

ಹೇಳಿಕೆ ನೀಡಲು ಬರುವಂತೆ ಪೋಲಿಸರು ನನಗೆ ನೋಟೀಸ್ ಕೊಟ್ಟಿಲ್ಲ. ದಿ: 22.11.2023ರಂದು ಹೇಳಿಕೆ ನೀಡಿದ್ದೇನೆ. ನಾನು ಬರವಣಿಗೆಯಲ್ಲಿ ಹೇಳಿಕೆ ನೀಡಿದ್ದೇನೆ. ಚಾಸಾ-1 ರವರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 87/12 ಮತ್ತು 87/13ರಲ್ಲಿ ಆರೋಪಿತರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಆರೋಪಿತರ ಸ್ವಾಧೀನಕ್ಕೆ ಚಾಸಾ-1 ರವರೇ ಬಂದು ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಮತ್ತು 4 ರವರಿಗೆ

ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ-6 ಮತ್ತು 8 ರವರು ಚಾಸಾ-1 ರವರ ಸ್ನೇಹಿತರು ಎಂದರೆ ಸರಿ. ನಾನು ಅಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.